ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.1092/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಮೇಶ್ ಎನ್.ಆರ್ | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ರಾಮಚಂದ್ರ | ಸಿ.ಡಬ್ಲ್ಯೂ.5 |
| ವಯಸ್ಸು | : | 41 ವರ್ಷ | |
| ವೃತ್ತಿ | : | ಪಿ.ಸಿ.ನಂ.468, ಗ್ರಾಮಾಂತರ ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 23-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ15.07.2022 ರಿಂದ ದಿಃ25.07.2025 ರವರೆಗೆ ಸಿ.ಇ.ಎನ್ ಪೊಲೀಸ್ ಠಾಣೆ ಚಿಕ್ಕಮಗಳೂರಿನಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ23.04.2025 ರಂದು ಸಂಜೆಃ06.45 ಗಂಟೆಗೆ ಚಾಸಾ-1 ರವರಿಗೆ ಮಾಹಿತಿ ಬಂದಿದ್ದು ಸದರಿಯವರು ಪ್ರಕರಣವನ್ನು ದಾಖಲಿಸಿ ನನಗೆ ಮತ್ತು ಚಾಸಾ-6 ರವರಿಗೆ ಮಾಹಿತಿಯನ್ನು ತಿಳಿಸಿ ಸಂಜೆಃ07.30 ಗಂಟೆಗೆ ಠಾಣೆಯಿಂದ ಕೆಎ-20/ಎಂಎ-6921 ಕಾರಿನಲ್ಲಿ ಹೊರಟು ಮಲ್ಲೇನಹಳ್ಳಿ ಅಂಚೆ, ಮಾವಿನಹಳ್ಳ ಗ್ರಾಮಕ್ಕೆ ಬಂದು ಬಸ್ ನಿಲ್ದಾಣದಲ್ಲಿ ಕಾರನ್ನು ನಿಲ್ಲಿಸಿ ಅಲ್ಲಿ ಇದ್ದಂತಹ ಚಾಸಾ-2 ಮತ್ತು ಚಾಸಾ-3 ರವರಿಗೆ ಚಾಸಾ-1 ರವರು ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿ ನೋಟೀಸ್ ಅನ್ನು

ಜಾರಿ ಮಾಡಿರುತ್ತಾರೆ. ನಂತರ ಅಲ್ಲಿಂದ ರಾತ್ರಿಃ 08.25 ಗಂಟೆಗೆ ಏಸುರವರ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಏಸು ಎನ್ನುವವರು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ನಾವು ಆತನನ್ನು ಸುತ್ತುವರಿದು ಹಿಡಿದು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಏಸು ಬಿನ್ ಜಾನ್, 43 ವರ್ಷ, ಕ್ರಿಶ್ಚಿಯನ್, ಮಾವಿನಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಪಂಚರ ಸಮಕ್ಷಮ ಕೇಸರಿ ಬಣ್ಣದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 61 ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡುಬಂತು. ಅದನ್ನು ಮಾರಾಟ ಮಾಡಲು ಪರವಾನಗಿ ಇದೆಯೇ ಎಂದು ವಿಚಾರಿಸಲಾಗಿ ಆತನು ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ.

ನಂತರ ಪಂಚರ ಸಮಕ್ಷಮ ಸದರಿ ಚೀಲವನ್ನು ದಾರದಿಂದ ಕಟ್ಟಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ಮಹಜರ್ ಅನ್ನು ರಾತ್ರಿಃ08.30 ರಿಂದ 09.30 ರವರೆಗೆ ತಯಾರಿಸಿರುತ್ತೇವೆ. ಸದರಿ ಮಹಜರ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-4(ಡಿ) ಇರುತ್ತದೆ. ಆ ಸಮಯದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ಮಹಜರ್ ಅನ್ನು ನಾನೇ ಚಾಸಾ-1 ರವರ ಉಕ್ತಲೇಖನದಂತೆ ಬರೆದಿರುತ್ತೇನೆ.

ದಿಃ24.04.2025 ರಂದು ಮೊಬೈಲ್ ನಿಂದ ಫೋಟೋ ಮತ್ತು ವೀಡಿಯೋವನ್ನು ಡಿ.ವಿ.ಡಿ ಗೆ ವರ್ಗಾಯಿಸಿರುತ್ತೇನೆ. ನಂತರ ಅದನ್ನು ಸಿ.ಡಿ ಮಾಡಿ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇನೆ. ಅದರ ಜೊತೆಗೆ ದೃಢೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-10(ಬಿ) ಇರುತ್ತದೆ. ಸಿ.ಡಿಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಹಾಗೂ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ಘಟನಾ ದಿನ ನಾವು ನಮ್ಮ ಠಾಣೆಯಿಂದ ರಾತ್ರಿಃ07.30 ಗಂಟೆಗೆ ಹೊರಟಿರುತ್ತೇವೆ. ಚಿಕ್ಕಮಗಳೂರಿನಿಂದ ಅರಿಶಿಣಗುಪ್ಪೆ ಗ್ರಾಮ 13 ರಿಂದ 14 ಕಿ.ಮೀ ದೂರ ಇರುತ್ತದೆ. ಸದರಿ ದಿನ ನಾನು, ಚಾಸಾ-1, ಚಾಸಾ-4, ಚಾಸಾ-6 ಠಾಣೆಯಿಂದ ಹೋಗಿದ್ದೆವು. ನಾವು ಸದರಿ ದಿನ ಚಾಸಾ-1 ರವರ ವಾಹನದಲ್ಲಿ ಹೋಗಿದ್ದೆವು. ಸದರಿ ದಿನ ನಮಗೆ ಬೇರೆ ಕಡೆ ಗಸ್ತು ಇರಲಿಲ್ಲ. ಸದರಿ ದಿನ ನಾವು ಒಂದೇ ಕಡೆ ದಾಳಿ ಮಾಡಿರುತ್ತೇವೆ. ಆರೋಪಿಯು ಕ್ರೀಮ್ ಕಲರ್ ಟೀ ಶರ್ಟ್ ಹಾಗೂ ಕಪ್ಪು ಕಲರ್ ನ ಪ್ಯಾಂಟ್ ಧರಿಸಿದ್ದರು.

ನಾನು ಕಂಪ್ಯೂಟರ್ ತರಬೇತಿಯನ್ನು ಪಡೆದಿರುತ್ತೇನೆ. ಸದರಿ ತರಬೇತಿಯ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಿನ ನಾವು ಘಟನಾ ಸ್ಥಳಕ್ಕೆ ಹೋಗಿಲ್ಲ,

ಘಟನಾ ಸ್ಥಳದಿಂದ ಯಾವುದೇ ಮುದ್ದೆ ಮಾಲುನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ದೃಢೀಕರಣ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ